ದಿನಾಂಕ: 25 ಏಪ್ರಿಲ್ 2014

# <u>ಪ್ರಚಾರ ದಿನಚರಿ-25/04/2014</u>

**ಅರುಣ್ ಜೇಟ್ಲಿ**
(ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ)

ನರೇಂದ್ರ ಮೋದಿ ಅವರು ವಾರಣಸಿಯಲ್ಲಿ ನಾಮಪತ್ರ ಸಲ್ಲಿಸುವ ಮುನ್ನ ಏರ್ಪಡಿಸಿದ್ದ ರೋಡ್ ಶೋನಲ್ಲಿ ಜನಸಾಗರವೇ ನೆರೆದಿತ್ತು. ಹಿಂದೆಂದು ಕಾಣದ ದೃಶ್ಯ ಅದಾಗಿತ್ತು. ಆಂಥಹ ಬೃಹತ್ ಸಂಖ್ಯೆಯಲ್ಲಿ ಜನರನ್ನು 'ಆಯೋಜಿಸುವುದು' ಸಾಧ್ಯವಾಗದ ಮಾತು. ಅವರು ನಿಜವಾಗಿಯೂ ಸ್ವಯಂ ಪ್ರೇರಣೆಯಿಂದ ಅಲ್ಲಿಗೆ ಆಗಮಿಸಿದ್ದರು. ಬೆಂಬಲ ಸಭೆಗೆ ಕೇವಲ ಕಾರ್ಯಕರ್ತರನ್ನು ಕರೆತರಲು ಸಾಧ್ಯ. ಆದರೆ ಜನರು ಅಷ್ಟು ಭಾರಿ ಸಂಖ್ಯೆಯಲ್ಲಿ ಸೇರುವಾಗ ಅಲ್ಲಿ ಸ್ವಯಿಚ್ಛೆ ಕೆಲಸ ಮಾಡಿರುತ್ತದೆ.

ದೇಶದಲ್ಲಿ ಮೋದಿ ಅಲೆ ಇಲ್ಲವೆಂಬ ಪ್ರಧಾನ ಮಂತ್ರಿಗಳ ಅಭಿಪ್ರಾಯ ಬಹುಶಃ ಮೋದಿ ಅವರಿಗೆ ಲಭಿಸಿದ ಭಾರಿ ಜನಬೆಂಬಲ ವೀಕ್ಷಿಸಿದ ನಂತರ ಮೂಡಿಬಂದ ಪ್ರತಿಕ್ರಿಯೆ ಇರಬೇಕು. ಭಾರತದ ಉದ್ದಗಲ 400ಕ್ಕೂ ಹೆಚ್ಚು ಸಾರ್ವಜನಿಕ ಸಭೆಗಳನ್ನು ಮೋದಿ ಸಂಭೋದಿಸಿದ್ದಾರೆ. ಈ ಸಾರ್ವಜನಿಕ ಸಭೆಗಳಲ್ಲಿ ಹಿಂದೆಂದು ಕಾಣದಷ್ಟು ಹೆಚ್ಚಿನ ಜನಸ್ತೋಮ ನೋಡಬಹುದು. ಭಾಜಪ ಕಾರ್ಯಕರ್ತರು ಹಾಗೂ ಬೆಂಬಲಿಗರ ಉತ್ಸಾಹ ನೋಡಿದಾಗ ಸ್ಫೂರ್ತಿಯ ಸೆಳೆ ಸ್ಪಷ್ಟವಾಗಿ ಗೋಚರಿಸುತ್ತದೆ. ಉತ್ತಮ ಆಡಳಿತ ವ್ಯವಸ್ಥೆಯ ವಿಚಾರಗಳನ್ನು ಮಾತ್ರ ಮಂಡಿಸುವ ಸಾಮರ್ಥ್ಯವನ್ನು ಪ್ರದರ್ಶಿಸಿರುವ ಮೋದಿ ಅವರು ಪ್ರಚೋದನೆಗಳನ್ನು ಲೆಕ್ಕಿಸದೆ ಸ್ಪಷ್ಟ ಚಿಂತನೆಗಳನ್ನೇ ಪ್ರತಿಪಾದಿಸುತ್ತಿದ್ದಾರೆ. ಉತ್ತರ, ಕೇಂದ್ರ ಹಾಗೂ ಪಶ್ಚಿಮ ಭಾರತದಲ್ಲಿ ಭಾಜಪಗೆ ಸಾಕಷ್ಟು ಜನಬೆಂಬಲವಿದೆ. ಈ ಪ್ರದೇಶಗಳಲ್ಲಿ ಮೋದಿ ಅಲೆ ಗೋಚರಿಸುವುದು ಸಾಮಾನ್ಯ. ದೇಶದ ಪೂರ್ವ ಹಾಗೂ ದಕ್ಷಿಣ ಭಾಗಗಳಲ್ಲಿ ಅವರು ಗಳಿಸುತ್ತಿರುವ ವ್ಯಾಪಕ ಜನಸ್ಪಂದನವೇ ಭಾಜಪ ಮತಗಳನ್ನು ವೃದ್ಧಿಸಲು ಸಾಧ್ಯ.

ಈ ಸನ್ನಿವೇಶಕ್ಕೆ ತದ್ವಿರುದ್ಧವಾಗಿ, ಗಾಂಧಿ ಕುಟುಂಬದವರ ಸ್ಥಿತಿ ದುಸ್ತರವಾಗಿದೆ. ಇದೇ ಮೊದಲ ಬಾರಿಗೆ, ನಿರ್ಗಮಿಸುತ್ತಿರುವ ಸರ್ಕಾರ ತನ್ನ ನಾಯಕರ ಮೂಲಕ ತಮ್ಮ ಸಾಧನೆಗಳನ್ನು ಹೇಳಿಕೊಳ್ಳುವ ಬದಲು ನಕಾರಾತ್ಮಕ ಪ್ರಚಾರದಲ್ಲಿ ತೊಡಗಿರುವುದನ್ನು ನೋಡಬಹುದು. ಕಾಂಗ್ರೆಸ್ ವಿರುದ್ಧ ಉದ್ಭವಿಸಿರುವ ಜನಾಕ್ರೋಶವನ್ನು ಜನರು ಚರ್ಚಿಸುತ್ತಿರುವಾಗಲೇ ಗಾಂಧಿ ಕುಟುಂಬದವರು ಅನ್ಯರನ್ನು ನಿಂದಿಸುವಲ್ಲಿ ನಿರತರಾಗಿದ್ದಾರೆ. ತಮ್ಮ ತಪ್ಪುಗಳನ್ನು ಮರೆಮಾಚಲು ವಿಪಕ್ಷಗಳನ್ನು ದೂರುವ ಸಂದರ್ಭಗಳು ಚರಿತ್ರೆಯಲ್ಲಿ ಕಾಣುವುದು ದುರ್ಲಭ. ಇಂತಹ ಉತ್ಕಟ ದುಸ್ಸಾಹಸಗಳಿಂದ ಏನನ್ನೂ ಗಳಿಸಲಾಗದು.

ಮೋದಿ ಅಲೆ ಕಾಣದಷ್ಟು ದೃಷ್ಟಿದೋಶ ಡಾ.ಮನಮೋಹನ್ ಸಿಂಗ್‌ರಿಗೆ ಇರಬಹುದು. ಅಥವಾ ನೋಡಿದರೂ ಒಪ್ಪಲು ಸಿದ್ಧರಿಲ್ಲವೇ? ಈ ಚುನಾವಣೆಯಲ್ಲಿ ಎರಡು ಪರಿಸ್ಥಿತಿಯಿದೆ. ಒಂದು ಕಾಂಗ್ರೆಸ್ ಹಾಗೂ ಯುಪಿಎ ವಿರುದ್ಧದ ಜನಾಕ್ರೋಷ. ನಾಯಕತ್ವ ವೈಫಲ್ಯ ಈ ಆಕ್ರೋಷಕ್ಕೆ ಮುಖ್ಯ ಕಾರಣ. ಎರಡನೆ ಚುನಾವಣಾ ಪ್ರತಿಕ್ರಿಯೆಗೆ ನಾಯಕತ್ವ ವೈಫಲ್ಯವೇ ಮೂಲ ಕಾರಣ. ಪರಿಹಾರದ ಅನ್ವೇಷಣೆಯಲ್ಲಿ ರೋಸಿಹೋದ ಭಾರತಕ್ಕೆ ಮೋದಿ ವಿಶ್ವಾಸದ ಸಂಕೇತವಾಗಿದ್ದಾರೆ. ಈ ಎರಡೂ ಪ್ರತಿಕ್ರಿಯೆಗಳ ಬೆಸುಗೆಯಿಂದ ಮೋದಿ ಅವರನ್ನು ದೇಶದ ಪ್ರಧಾನ ಮಂತ್ರಿ

ಮಾಡುವ ಹೆಬ್ಬಯಕೆಗೆ ಪುಷ್ಟಿ ದೊರೆತಿದೆ. ವಾಚಾಳತನವುಳ್ಳ ಕಾಂಗ್ರೆಸ್ ನಾಯಕರು ನಿಸ್ಸಹಾಯಕರಾಗಿ ನೋಡುತ್ತಿದ್ದಾರೆ. ಮೋದಿ ವಿರುದ್ಧ ನೀಡಲಾಗುವ ಅಸಭ್ಯ ಹಾಗೂ ಒರಟುತನದ ಹೇಳಿಕೆಗಳೇ ಮೋದಿಪರ ಅಲೆ ತೀವ್ರಗೊಳ್ಳಲು ಕಾರಣವಾಗುತ್ತಿವೆ ಎಂದು ಚಿದಂಬರಂಗಳು, ಸಿಬಲ್‌ಗಳು, ತಿವಾರಿಗಳು, ಆನಂದ್ ಶರ್ಮಾಗಳಿಗೆ ಮನವರಿಕೆ ಆದಂತಿದೆ.

-----------------------------------------

ಪಂಜಾಬಿಗೆ ಮೋದಿ

ಇಂದು ಪಂಜಾಬಿನಲ್ಲಿ ಮೋದಿ ಐದು ಸಭೆಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಅವರು ಗುರದಾಸಪುರ, ಭಟಿಂಡ, ಹೋಶಿಯಾರಪುರ್, ಲೂಧಿಯಾನ ಮತ್ತು ಅಮೃತಸರ ಲೋಕ ಸಭಾ ಕ್ಷೇತ್ರಗಳಲ್ಲಿ ಇಂದು ಪ್ರಚಾರ ನಡೆಸಲಿದ್ದಾರೆ. ಸ್ಪರ್ಧಾಕಣದ ಸ್ವರೂಪವನ್ನೇ ಬದಲಾಯಿಸಬಲ್ಲ ನರೇಂದ್ರ ಮೋದಿ ಮೋಡಿಗೆ ಪಂಜಾಬ್ ಕಾತರದಿಂದ ಕಾಯುತ್ತಿದೆ.

✲✲✲✲✲